## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಅಂಗವಿಕಲರಿಗಾಗಿ ಸ್ವಯಂ ಉದ್ಯೋಗ ಒದಗಿಸಿಕೊಡುವ ಆಧಾರ ಯೋಜನೆಯಡಿ ಮಂಜೂರು ಮಾಡುವ ಸಾಲ/ಸಹಾಯಧನ ಮೊತ್ತವನ್ನು ಪರಿಷ್ಕರಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ಮಮಇ:212:ಪಿಹೆಚ್‌ಪಿ:98 : ದಿ: 13-11-98.
2. ನಿರ್ದೇಶಕರು ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರ ಪತ್ರ ಸಂಖ್ಯೆ: ನಿಅಕಇ.ಯೋ:10:2007-07:971, ದಿನಾಂಕ: 03-05-20೦೭.
3. ದಿನಾಂಕ: 17-06-2006ರಂದು ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡವಳಿಗಳು.

### ಪ್ರಸ್ತಾವನೆ:

ಮೇಲೆ ಕ್ರಮಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 13-11-98ರ ಸರ್ಕಾರದ ಆದೇಶದಲ್ಲಿ ಸ್ವಯಂ ಉದ್ಯೋಗ ಒದಗಿಸಿಕೊಡುವ ಆಧಾರ ಯೋಜನೆಯಡಿ ರಾಜ್ಯದಲ್ಲಿರುವ ಅಂಗವಿಕಲರಿಗೆ ಅವರು ವಾಸಿಸುವ ಸ್ಥಳದಲ್ಲಿ ಸಣ್ಣ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಳ್ಳುವುದಕ್ಕಾಗಿ ಬಂಡವಾಳ ರೂ. 6000/- ಹಾಗೂ ಪೆಟ್ಟಿಗೆ ಅಂಗಡಿಗಾಗಿ ರೂ. 6000/- ಹೀಗೆ ಒಟ್ಟು ರೂ. 12000/- ಗಳನ್ನು ಸಾಲವಾಗಿ / ಸಹಾಯಧನ ಮಂಜೂರು ಮಾಡಲು ಸರ್ಕಾರವು ಅನುಮತಿ ನೀಡಿದೆ.

ಮೇಲೆ ಕ್ರಮಸಂಖ್ಯೆ (2) ರಲ್ಲಿ ಓದಲಾದ ಪತ್ರದಲ್ಲಿ ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ ಇವರು ಆಧಾರ ಯೋಜನೆಯನ್ನು 1988 ರಲ್ಲಿ ಪರಿಷ್ಕರಿಸಿದ್ದು, ಯೋಜನಗಳ ನಿಬಂಧನೆಗಳನ್ವಯ ರೂ. 6000/- ಗಳ ವೆಚ್ಚದಲ್ಲಿ ಪೆಟ್ಟಿಗೆ ಅಂಗಡಿಯನ್ನು ನಿರ್ಮಿಸಲು ಸಾಧ್ಯವಾಗುವುದಿಲ್ಲ ಮತ್ತು ಈಗ ಮಂಜೂರು ಮಾಡಲಾಗುತ್ತಿರುವ ಬಂಡವಾಳ ರೂ. 6000/- ಗಳ ಮೊಬಲಗು ಸಾಕಾಗುವುದಿಲ್ಲವೆಂದು ತಿಳಿಸುತ್ತಾ ಈಗಿರುವ ಮಿತಿಯನ್ನು ಪರಿಷ್ಕರಿಸಿ ಪೆಟ್ಟಿಗೆಯನ್ನು ನಿರ್ಮಿಸಲು ಕನಿಷ್ಟ ರೂ. 15,000/- ಗಳನ್ನು ಒದಗಿಸಬೇಕೆಂದು ಹಾಗೂ ಬಂಡವಾಳ ಹಣವನ್ನು ರೂ. 6000/- ಗಳಿಂದ ರೂ. 20,000/- ಗಳಿಗೆ ಹೆಚ್ಚಿಸಲು ಹಾಗೂ ಇನ್ನು ಮುಂದೆ 12,000/- ರೂ.ಗಳ (6000+6000/-) ಬದಲಾಗಿ ರೂ. 35,000/- (15,000+20,000) ಗಳನ್ನು ಮಂಜೂರು ಮಾಡಲು ಸಹಾಯವಾಗುವಂತೆ ಉಲ್ಲೇಖಿತ ದಿನಾಂಕ: 13.11.98ರ ಆದೇಶವನ್ನು ಮಾರ್ಪಾಡು ಮಾಡಬೇಕೆಂದು ಪ್ರಸ್ತಾಪಿಸಿದ್ದಾರೆ.

ನಿರ್ದೇಶಕರ ಪ್ರಸ್ತಾವನೆಯನ್ನು ದಿನಾಂಕ: 17-06-2006 ರಂದು ನಡೆದ ಅಧಿಕಾರಯುಕ್ತ ಸಮಿತಿಯ ಸಭೆಯಲ್ಲಿ ಪರಿಶೀಲಿಸಿ, ಸಮಿತಿಯು ಈ ಯೋಜನೆಯನ್ನು ಮಾರ್ಪಡಿಸಲು ಆರ್ಥಿಕ ಇಲಾಖೆಯ ಅನುಮತಿ ಪಡೆಯಬೇಕೆಂಬ ಷರತ್ತಿನೊಂದಿಗೆ ಅನುಮೋದನೆಯನ್ನು ನೀಡಿರುತ್ತದೆ.

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆರವರ ಕೋರಿಕೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಮಮಇ 156 ಪಿಹೆಚ್‌ಪಿ 2006 (1) ಬೆಂಗಳೂರು, ದಿನಾಂಕ: 28-08-2006**

ನಿರ್ದೇಶಕರು, ಅಂಗವಿಕಲರ ಮತ್ತು ಹಿರಿಯ ನಾಗರಿಕರ ಕಲ್ಯಾಣ ಇಲಾಖೆ, ಇವರ ಪ್ರಸ್ತಾವನೆಯನ್ನು ಪರಿಶೀಲಿಸಿದ ನಂತರ ದಿನಾಂಕ: 13-11-98ರ ಸರ್ಕಾರಿ ಆದೇಶವನ್ನು ಭಾಗಶಃ ಮಾರ್ಪಡಿಸಿ ಆಧಾರ ಯೋಜನೆಯಡಿ ಪೆಟ್ಟಿಗೆ ಅಂಗಡಿಗಾಗಿ ಈಗ ಮಂಜೂರು ಮಾಡುತ್ತಿರುವ ಮೊತ್ತ ರೂ. 6000/- ಗಳಿಂದ ರೂ. 15000/- ಗಳಿಗೆ ಹಾಗೂ ಬಡ್ಡಿ ರಹಿತ ಸಾಲದ ಬಂಡವಾಳ ಹಣವನ್ನು ರೂ. 6000/- ಗಳಿಂದ ರೂ. 20,000/- ಗಳಿಗೆ ಹೆಚ್ಚಿಸಿ ಅಂದರೆ ಒಟ್ಟು ರೂ. 12,000/- (ರೂ. 6000/- + 6000/-) ಗಳ ಬದಲಾಗಿ ಇನ್ನು ಮುಂದೆ ರೂ. 35,000/- (ರೂ. 15,000/- + 20,000/-) ಗಳನ್ನು ಮಂಜೂರು ಮಾಡಲು ಈ ಕೆಳಕಂಡ ಷರತ್ತುಗಳೊಂದಿಗೆ ಸರ್ಕಾರದ ಅನುಮತಿ ನೀಡಲಾಗಿದೆ.

1. ಈಗ ಬಡ್ಡಿ ರಹಿತ ಸಾಲದ ಬಂಡವಾಳ ಹಣವನ್ನು ರೂ. 6000/- ಗಳಿಂದ ರೂ. 20,000/- ಗಳಿಗೆ ಹೆಚ್ಚಿಸುತ್ತಿರುವುದರಿಂದ ಇಲಾಖೆಯು ಸಾಲವನ್ನು ವಸೂಲಿ ಮಾಡಲು ಹೆಚ್ಚಿನ ಪ್ರಯತ್ನ ಪಡುವುದು ಮತ್ತು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದು.
2. ಬಂಡವಾಳಕ್ಕೆಂದು ಮಂಜೂರು ಮಾಡಲಾಗುವ ಬಡ್ಡಿ ರಹಿತ ಸಾಲ ರೂ. 20,000/- ಮೊಬಲಗನ್ನು ಈಗಿರುವ ವ್ಯವಸ್ಥೆಯ ಬದಲಾಗಿ ಫಲಾನುಭವಿಗಳಿಂದ 40 ತಿಂಗಳಲ್ಲಿ ತಿಂಗಳಿಗೆ ರೂ. 500/- ಗಳಂತೆ ವಸೂಲಾತಿ ಮಾಡತಕ್ಕದ್ದು.
3. ಈ ಯೋಜನೆಯ ಸೌಲಭ್ಯ ಮಂಜೂರು ಮಾಡಿದ ಬಗ್ಗೆ ಫಲಾನುಭವಿಗಳ ಗುರುತಿನ ಚೀಟಿಯಲ್ಲಿ ನಮೂದಿಸತಕ್ಕದ್ದು.
4. ಈ ಯೋಜನೆಯ ಮಾರ್ಪಾಡಿನ ವೆಚ್ಚವು ಇದಕ್ಕಾಗಿ ಆಯವ್ಯಯದಲ್ಲಿ ಹಂಚಿಕೆ ಮಾಡಿದ ಮೊತ್ತದೊಳಗೆ ಇರತಕ್ಕದ್ದು, ಹೆಚ್ಚಿನ ಅನುದಾನ ಒದಗಿಸಲು ಕೋರಿಕೆ ಸಲ್ಲಿಸತಕ್ಕದ್ದಲ್ಲ.

ಈ ಸಂಬಂಧ ತಗಲುವ ವೆಚ್ಚವನ್ನು 2006-07ನೇ ಸಾಲಿನ ಲೆಕ್ಕಶೀರ್ಷಿಕೆ 2235-02-101-0-99 ಯೋಜನೆ-ಉಪ ಲೆಕ್ಕಶೀರ್ಷಿಕೆ-100 ಧನಸಹಾಯ / ಪರಿಹಾರ ಇದರಡಿಯಲ್ಲಿ ಒದಗಿಸಿರುವ ಆಯವ್ಯಯದಲ್ಲಿ ಭರಿಸತಕ್ಕದ್ದು.

ಆದೇಶವನ್ನು ದಿನಾಂಕ: 17-06-2006 ರಂದು ನಡೆದ ಅಧಿಕಾರಯುಕ್ತ ಸಮಿತಿ ಸಭೆಯ ಅನುಮೋದನೆಯಂತೆ ಹಾಗೂ ಯೋಜನಾ ಇಲಾಖೆಯು ಟಿಪ್ಪಣಿ ಸಂಖ್ಯೆ: ಪಿಡಿ.25.ಐ.ಎಂ.ಎಂ.2006, ದಿನಾಂಕ: 27-05-2006 ರಲ್ಲಿ ಮತ್ತು ಆರ್ಥಿಕ ಇಲಾಖೆಯು ಟಿಪ್ಪಣಿ ಸಂಖ್ಯೆ: ಎಫ್‌ಡಿ348/ವೆಚ್ಚ-3/2006. ದಿನಾಂಕ: 22.07.2006 ರಲ್ಲಿ ನೀಡಿರುವ ಸಹಮತಿ ಪ್ರಕಾರ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

(ಆರ್.ಎಂ. ಚಂದ್ರಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಇಲಾಖೆ

ಪ್ರತಿ ಮಾಹಿತಿಗಾಗಿ:

1. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳಿಗೆ
2. ಮಾನ್ಯ ಉಪ ಮುಖ್ಯಮಂತ್ರಿಗಳ ಆಪ್ತ ಕಾರ್ಯದರ್ಶಿಗಳು
3. ಮಾನ್ಯ ಇಲಾಖಾ ಸಚಿವರ ಆಪ್ತ ಕಾರ್ಯದರ್ಶಿಗಳು
4. ಪ್ರಧಾನ ಕಾರ್ಯದರ್ಶಿಗಳು / ಉಪ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಅವರ ಆಪ್ತ ಸಹಾಯಕರು